# ಆಧ್ಯಾತ್ಮಿಕ ಸೌಭಾಗ್ಯ

❑ ಸ್ವಾಮಿ ವಿನಯಾನಂದ ಸರಸ್ವತಿ

**ಅಧ್ಯಾತ್ಮವೊಂದೇ ನೈಜಸುಖದ ನೆಲೆ ಮತ್ತು ಉಳಿದೆಲ್ಲವೂ ಇದಕ್ಕೆ ಪೂರಕವಾಗಿರಬೇಕು—ಎನ್ನುತ್ತಾರೆ ಧಾರವಾಡದಲ್ಲಿರುವ ಖಾಸಗಿ ಕೇಂದ್ರವಾದ ರಾಮಕೃಷ್ಣ ವಿವೇಕಾನಂದ ಆಶ್ರಮದಲ್ಲಿರುವ ಸ್ವಾಮಿ ವಿನಯಾನಂದ ಸರಸ್ವತಿಯವರು.**

**ಜೀ**ವನದಲ್ಲಿ ಆನಂದದ ರಸಾಸ್ವಾದ ಮಾಡಬೇಕೆಂಬ ಆತುರ ಕಾತರ ಎಲ್ಲ ಕಡೆಗಳಲ್ಲೂ ಕಂಡುಬರುವ ಸರ್ವೇಸಾಮಾನ್ಯ ದೃಶ್ಯ. ಆದರೆ ಈ ರಸವನ್ನು ಹೀರುವುದಕ್ಕೆ ಆರಿಸಿಕೊಂಡ ವಿದ್ಯೆ ಅಥವಾ ಮಾರ್ಗ ಮಾತ್ರ ಪ್ರತಿಯೊಬ್ಬರದೂ ಒಂದೊಂದು ಬಗೆ. ಸಾಹಿತ್ಯ, ಸಂಗೀತ, ನಾಟ್ಯ, ಚಿತ್ರಕಲೆ, ಅಧ್ಯಾತ್ಮ... ಇತ್ಯಾದಿ ಒಟ್ಟು ೬೪ ವಿದ್ಯೆಗಳು ಎಂದು ಹೇಳಲಾಗಿದೆ. ದೀರ್ಘಕಾಲದ ಶಿಸ್ತುಬದ್ಧ ಅಭ್ಯಾಸದಿಂದ ಕರಗತ ಮಾಡಿಕೊಂಡ ಈ ವಿದ್ಯೆಗಳು ನಮಗೆ ರಸದೌತಣ ಮಾಡಿಸುವಂತಹ ಮಾರ್ಗಗಳೇ. ಆದರೆ ಈ ಎಲ್ಲ ವಿದ್ಯೆಗಳಲ್ಲಿ ಅಧ್ಯಾತ್ಮವಿದ್ಯೆ ಎಂಬುದು ರತ್ನಗಳಲ್ಲೆಲ್ಲಾ ಕೊಹಿನೂರು ರತ್ನದಂತೆ. ಇದು ನಮಗೆ ಸಂಪೂರ್ಣ ಆನಂದವನ್ನು ತಂದುಕೊಡುತ್ತದೆ. ಈ ಅಧ್ಯಾತ್ಮದ ಸ್ಥಿತಿಗೆ ತಲುಪುವುದಕ್ಕೆ ಉಳಿದೆಲ್ಲ ವಿದ್ಯೆಗಳೂ ಪೂರಕ ಮತ್ತು ಪ್ರೇರಕ. ಭಗವದ್ಗೀತೆ ಹೇಳುವಂತೆ,

ಯಂ ಲಬ್ಧ್ವಾ ಚಾಪರಂ ಲಾಭಂ ಮನ್ಯತೇ ನಾಧಿಕಂ ತತಃ ।
ಯಸ್ಮಿನ್ ಸ್ಥಿತೋ ನ ದುಃಖೇನ ಗುರುಣಾಪಿ ವಿಚಾಲ್ಯತೇ ॥

"ಯಾವುದನ್ನು ಪಡೆದಮೇಲೆ ಇನ್ನುಳಿದ ಯಾವುದನ್ನೂ ಅಧಿಕವೆಂದು ಭಾವಿಸುವುದಿಲ್ಲವೋ, ಯಾವುದರಲ್ಲಿ ನೆಲೆಸಿದ ಮೇಲೆ ಎಂತಹ ಗುರುತರವಾದ ದುಃಖದಿಂದಲೂ ವಿಚಲಿತನಾಗುವುದಿಲ್ಲವೋ (ಅದನ್ನು ಪಡೆದುಕೊ)." ಇಂತಹ ಸ್ಥಿತಿಯನ್ನು (ಆತ್ಮವನ್ನು) ಅನುಭವಿಸಿದವನಿಗೆ ಯಾವ ಕಾಮನೆಯೂ ಉಳಿಯದೆ ಸರ್ವದಾ ನಿತ್ಯತೃಪ್ತನಾಗಿರುತ್ತಾನೆ. "ಧನರಹಿತನಾಗಿದ್ದರೂ ಸದಾ ಸಂತುಷ್ಟನಾಗಿರುತ್ತಾನೆ; ಯಾರ ಸಹಾಯವಿಲ್ಲದಿದ್ದರೂ ಮಹಾಬಲವಂತನಾಗಿರುತ್ತಾನೆ. ವಿಷಯಭೋಗಗಳನ್ನು ಅನುಭವಿಸದಿದ್ದರೂ ಆತ್ಮತೃಪ್ತನಾಗಿರುತ್ತಾನೆ; ಅಸದೃಶನಾಗಿದ್ದರೂ ಸಮದೃಷ್ಟಿವುಳ್ಳವನಾಗಿರುತ್ತಾನೆ" ಎಂದು ವಿವೇಕಚೂಡಾಮಣಿ ನಮಗೆ ತಿಳಿಸುತ್ತದೆ. **(ನಿರ್ಧನೋಽಪಿ ಸದಾ ತುಷ್ಟೋಽಪ್ಯಸಹಾಯೋ ಮಹಾಬಲಃ । ನಿತ್ಯತೃಪ್ತೋಽಪ್ಯಭುಂಜಾನೋಽಪ್ಯಸಮಃ ಸಮದರ್ಶನಃ ॥** ೫೪೨ ॥. )

ಸರ್ವದಾ ನಮ್ಮ ಸಹಾಯಕ್ಕೆ ಸಿದ್ಧನಾಗಿರುವ, ಅತ್ಯಂತ ಪ್ರೀತಿಪಾತ್ರನೂ, ಶಕ್ತಿವಂತನೂ ಹಾಗೂ ಆನಂದಮಯನೂ ಆದ ನಮ್ಮ ಸನಾತನ, ಚಿರನೂತನ, ನವಚೇತನ ನಮ್ಮೊಳಗೇ ಇದ್ದಾನೆ. ಇಂತಹ ಮಹಾಶಕ್ತಿ ಮತ್ತು ಮಹದಾನಂದವನ್ನು ಅನಾವರಣ ಮಾಡುವ ವಿದ್ಯೆಯೇ ಅಧ್ಯಾತ್ಮವಿದ್ಯೆ. ಇದು ನಮ್ಮ ಪರಿಪೂರ್ಣ ಆನಂದಕ್ಕೆ ಅಡ್ಡಿಯಾಗಿರುವ ಸ್ವಾರ್ಥದ ಪರದೆಯನ್ನು ಹರಿದೆಸೆಯುತ್ತದೆ. ಆಧ್ಯಾತ್ಮಿಕ ಸೌಭಾಗ್ಯವನ್ನು ಪಡೆದ ವ್ಯಕ್ತಿ ವಿವೇಕದ ಪ್ರಭೆಯನ್ನು ಸುತ್ತಲೂ ಪಸರಿಸುತ್ತಾ ನಯವಾಗಿ ವಿನಯದ ಔನ್ನತ್ಯವನ್ನು ಏರುತ್ತಾನೆ. ಆಧ್ಯಾತ್ಮಿಕತೆ ಎಂದರೆ ಪರಿಪೂರ್ಣ ನಿಃಸ್ವಾರ್ಥ ಸ್ಥಿತಿ. ಮನದಲ್ಲಿ ಸ್ವಾರ್ಥದ ವಾಸನೆಯಿಲ್ಲದೆ ಇತ್ತು ಎಂದರೆ ಎಲ್ಲ ವಿದ್ಯೆಗಳೂ ಅಧ್ಯಾತ್ಮವಿದ್ಯೆಗಳಾಗುತ್ತವೆ. ಎಲ್ಲ ಮಾರ್ಗಗಳೂ ಮಂಗಳಕರವಾದ ದಿವ್ಯಮಾರ್ಗಗಳಾಗುತ್ತವೆ. ಸ್ವಾಮಿ ವಿವೇಕಾನಂದರ ಧರ್ಮಸಂದೇಶಕ್ಕೆ ಸಂಬಂಧಿಸಿದಂತೆ ನಿವೇದಿತಾ ಹೇಳುತ್ತಾರೆ : "ಎಲ್ಲ ರೀತಿಯ ಪೂಜೆ ಮಾತ್ರವಲ್ಲ, ಎಲ್ಲ ಬಗೆಯ ಕೆಲಸವೂ ಎಲ್ಲ ಬಗೆಯ ಹೋರಾಟವೂ ಎಲ್ಲ ವಿಧದ ಸೃಷ್ಟಿಯೂ ಸಾಕ್ಷಾತ್ಕಾರದ ಮಾರ್ಗ. ಲೌಕಿಕ ಮತ್ತು ಪಾರಮಾರ್ಥಿಕ ಎಂಬ ಭೇದ ಇನ್ನಿಲ್ಲ. ದುಡಿಮೆಯೇ ಪ್ರಾರ್ಥನೆ, ಆತ್ಮವಿಜಯವೇ ತ್ಯಾಗ, ಜೀವನವೇ ಧರ್ಮ."

ಆದರೆ ಇದಕ್ಕೆ ಅತ್ಯಂತ ಮೂಲಭೂತವಾಗಿ ನಾವು ಒಳಗೂ ಹೊರಗೂ ಪ್ರಾಮಾಣಿಕರಾಗಬೇಕು. ಸ್ವಾಮಿ ವಿವೇಕಾನಂದರಿಗೆ ಅತ್ಯಂತ ಅಸಹನೀಯವಾದ ಗುಣಗಳೆಂದರೆ ಹೇಡಿತನ ಮತ್ತು ಅಪ್ರಾಮಾಣಿಕತೆ. "ಹೇಡಿಗಳಿಗೆ ನಾನೇನು ಉಪದೇಶಿಸಲಿ? ಏನನ್ನೂ ಹೇಳಲಾರೆ.... ನನ್ನ ಪಾಲಿಗೆ ಅಳುಕಿ ಗೋಗರೆಯುವುದು, ಹಲ್ಕಿರಿಯುವುದು, ಅವನತಿಯ ಜಡತೆ—ಇವು ಮತ್ತು ನರಕ ಎರಡೂ ಒಂದೇ. ಯಾರ ಮನದಲ್ಲಿ ಧೈರ್ಯವಿದೆಯೊ, ಹೃದಯದಲ್ಲಿ ಪ್ರೀತಿಯಿದೆಯೊ ಅಂಥವರು ನನ್ನೆಡೆಗೆ ಬರಲಿ. ನನಗಿನ್ನಾರೂ ಬೇಡ" ಎಂದು ಸ್ವಾಮೀಜಿ ಗುಡುಗಿದ್ದಾರೆ.

ಆದ್ದರಿಂದ ಇನ್ನಾದರೂ ನಾವು ಪ್ರಾಮಾಣಿಕರಾಗಿ ಸ್ವಾರ್ಥವನ್ನು ಬಿಟ್ಟು ನಿಃಸ್ವಾರ್ಥದ ನಿಜವಾದ ಆನಂದರಸವನ್ನು ಪಾನ ಮಾಡಬಾರದೆ, ಅನುಭವಿಸಬಾರದೆ? ನಾವೆಲ್ಲರೂ ಪರಮಪ್ರೇಮದ ಸಾಗರ, ಪ್ರೀತಿಯ ಆಗರ. ಆದರಿದು ಲಭ್ಯವಾಗುವುದು ನಿಷ್ಠೆಯಿಂದ ಆಚರಿಸುವ ನೀತಿಯಿಂದ ಮಾತ್ರ. ನಾವು ಯಾವ ಕಡೆ ಕಣ್ಣು ಹಾಯಿಸಿದರೂ ಹಲವು ಬಗೆಬಗೆಯ ರೀತಿ ಕಾಣುತ್ತದೆಯೆ ವಿನಾ ನೀತಿ ಕಂಡುಬರುತ್ತಿಲ್ಲ. ಎರಡು ಮೂರು ಪದವಿಗಳನ್ನು ಗಳಿಸಿದ್ದರೂ ನೀತಿ ಮಾತ್ರ ದುರ್ಲಭ; ಏಕೆಂದರೆ ನಮ್ಮ ಪ್ರಾಥಮಿಕ ಶಾಲೆಯಲ್ಲಿ ಹೇಳಿಕೊಟ್ಟ ಸತ್ಯಂ ವದ, ಧರ್ಮಂ ಚರ, **ಮಾತೃದೇವೋ ಭವ, ಪಿತೃದೇವೋ ಭವ, ಆಚಾರ್ಯದೇವೋ ಭವ**—"ಸತ್ಯವನ್ನೇ ಹೇಳು, ಧರ್ಮವನ್ನೇ ಆಚರಿಸು, ಮಾತಾಪಿತೃ ಆಚಾರ್ಯರು ನಿನ್ನ ದೇವರುಗಳು" ಎನ್ನುವ ಮೂಲ ಪಾಠವನ್ನೇ ಕಡೆಗಣಿಸಿದ್ದೇವೆ. ಇದರಿಂದಾಗಿ ನಮ್ಮ ದೇಶ ದುರ್ಬಲವಾಯಿತು.

ಈಗ ಪ್ರಶ್ನೆ: ನಾವೆಲ್ಲ ಶಕ್ತಿವಂತರೂ ಪ್ರೀತಿವಂತರೂ ನೀತಿವಂತರೂ ಆಗುವುದಕ್ಕೆ ಇರುವ ಏಕೈಕ ಉಪಾಯವೆಂದರೆ, ಸ್ವಾಮೀಜಿ ಹೇಳು ವಂತೆ, "ಉಪನಿಷತ್ತುಗಳಿಗೆ ಹಿಂದಿರುಗುವುದು." ನಾವೇನಾದರೂ ಉಜ್ವಲ ಭವಿಷ್ಯವನ್ನು ಕಾಣಬೇಕಾದರೆ ಪ್ರಾಥಮಿಕ ಶಾಲೆಯ ಆ ಸನಾತನ ಆರ್ಯ ಸಂಸ್ಕೃತಿಯ ಮೂಲಪಾಠವನ್ನು ಮತ್ತೊಮ್ಮೆ ಕಂಠಪಾಠ ಮಾಡಿಕೊಂಡು ಹೃದ್ಗತ ಮಾಡಿಕೊಳ್ಳುವುದೊಂದೇ ಮಾರ್ಗ.

ಭೋಗಭಾವನೆಗಳಿಂದ ತುಂಬಿರುವ ಹೃದಯವನ್ನು ಪ್ರಾರ್ಥನೆಯ ಕಣ್ಣೀರಿನಿಂದ ತೊಳೆದು ಭಕ್ತಿ ಭಾವನೆಗಳಿಂದ ತುಂಬುವುದೇ ನಿಜವಾದ ನೈತಿಕತೆ. ಯಾವ ಹೃದಯದಲ್ಲಿ ಭಕ್ತಿ ತುಂಬಿರುತ್ತದೆಯೋ ಅಲ್ಲಿ ಪ್ರೀತಿಯ ರಸ ಎಂಬ ಜೇನು ಸದಾ ಹರಿಯುತ್ತಿರುತ್ತದೆ. ಯಾರ್‍ಯಾರು ಅವನ ಬಳಿ ಬರುತ್ತಾರೋ ಅವರೆಲ್ಲಾ ಈ ಮಾಧುರ್ಯವನ್ನು ಸವಿಯುತ್ತಾರೆ. ಪರಿಶುದ್ಧರಾದ ಸಾಧುಗಳ ಹೃದಯದಲ್ಲಿ ಈ ಪ್ರೀತಿಯ ಮಧು ಉತ್ಪತ್ತಿ ಯಾಗುತ್ತದೆ. ದುಷ್ಟರು ಕೆಲವೊಮ್ಮೆ ಈ ಸಾಧುಗಳ ಹೃದಯ ವನ್ನು ತಮ್ಮ ಟೀಕೆ, ನಿಂದನೆ, ಅಪಹಾಸ್ಯಗಳಿಂದ ತಿವಿಯುತ್ತಾರೆ. ಆಗಲೂ ಈ ಸಾಧುಗಳ ಹೃದಯದಿಂದ ಮಧು ತೊಟ್ಟಿಕ್ಕುತ್ತದೆ. ನಾವೇನಾದರೂ ಈ ಸಾಧುಗಳ ಸೇವೆ ಮಾಡಿ ಅವರ ಹೃದಯ ವನ್ನು ಗೆದ್ದಿದ್ದೇ ಆದಲ್ಲಿ ಆ ಪ್ರೀತಿಯ ಮಧು ಎಂಬುದು ನಮ್ಮ ಹೃದಯದಲ್ಲೇ ಉತ್ಪತ್ತಿಯಾಗುವುದಕ್ಕೆ ಪ್ರಾರಂಭವಾಗುತ್ತದೆ. ಹೃತ್ಪೂರ್ವಕವಾದ ಪ್ರಾರ್ಥನೆಯಿಂದ ಪಡೆಯಲಸಾಧ್ಯವಾದದ್ದು ಯಾವುದೂ ಇಲ್ಲ.

ಧ್ಯಾನ ಕಷ್ಟಸಾಧ್ಯ ನಿಜ! ಆದರೆ ಧ್ಯಾನಮಾಡುವ ಶಕ್ತಿಯಿಲ್ಲ ಎಂದರೆ ಭಕ್ತಿಯಿಂದ ಪ್ರಾರ್ಥನೆ ಮಾಡುವ ಯುಕ್ತಿಯನ್ನಾದರೂ ಬೆಳಸಿಕೊಳ್ಳಬಹುದಲ್ಲ! ಕಲಿಯುಗದಲ್ಲಿ ಹರಿನಾಮಗುಣ ಕೀರ್ತನೆಯೊಂದೇ ನಮ್ಮ ಶೀಘ್ರ ಪ್ರಗತಿಗೆ ಸುಲಭೋಪಾಯ. ನಾವು ಪ್ರಾರ್ಥನೆ, ಭಜನೆ, ಧ್ಯಾನದಲ್ಲಿ ಮುಂದುವರಿದಂತೆ ನಮ್ಮ ಅಂತರಂಗದಲ್ಲಿರುವ ಭಗವಂತನ ಸಂಗವೇ ನಿಜವಾದ ಸತ್ಸಂಗ ಎಂಬುದು ಅರಿವಾಗುತ್ತಾ ಬರುತ್ತದೆ. ಯಾರು ಇಂತಹ ಸ್ಥಿತಿಗೆ ಏರಿದ್ದಾರೋ ಅವರಿಗೆ ಹೊರಗಿನ ವಸ್ತುಗಳ ವ್ಯಕ್ತಿಗಳ ಸಂಗ ರುಚಿಸುವುದಿಲ್ಲ ಹಾಗೂ ಅವರು ಸರ್ವದಾ ತಮ್ಮ ಅಂತರಂಗ ದಲ್ಲಿಯೇ ಬದುಕುವುದಕ್ಕೆ ಬಯಸುತ್ತಾರೆ. "ವ್ಯಕ್ತಿಯು ಅಂತ ರಂಗಕ್ಕೆ ಜಪ, ಧ್ಯಾನ, ಪ್ರಾರ್ಥನೆ, ಪೂಜೆ ಪಾರಾಯಣಗಳೆಂಬ ಆಹಾರವನ್ನು ಎಷ್ಟೆಷ್ಟು ಕಡಮೆಮಾಡುತ್ತಾನೋ ಅಷ್ಟಷ್ಟು ಹೊರಗಿನ ವಸ್ತು ಮತ್ತು ವ್ಯಕ್ತಿಗಳಿಗಾಗಿ ಹಂಬಲಿಸಿ ಪಡೆದು ಕೊಳ್ಳುತ್ತಾನೆ" ಎಂದು ಸ್ವಾಮಿ ಪರಮಾನಂದರು ತಮ್ಮ ದೈನಂದಿನ ಚಿಂತನೆ ಮತ್ತು ಪ್ರಾರ್ಥನೆ ಎಂಬ ಗ್ರಂಥದಲ್ಲಿ ತಿಳಿಸುತ್ತಾರೆ.

ಯಾವಾಗ ನಮ್ಮನ್ನು ನೋಡಿದರೆ ಭಗವಂತನನ್ನು ನೋಡಿ ದಂತೆ ಇತರರಿಗೆ ಭಾಸವಾಗುತ್ತದೆಯೋ, ಹಾಗೆಯೇ ನಮ್ಮ ಸನ್ನಿಧಿ ಅವರಿಗೆ ವಾತ್ಸಲ್ಯ ಪ್ರೇಮದ ಅಮೃತವನ್ನು ಪಾನ ಮಾಡಿಸು ತ್ತದೆಯೋ ಆಗ ನಾವು ತಿಳಿದುಕೊಳ್ಳಬೇಕು ನಮ್ಮ ಪ್ರಾರ್ಥನೆ ಧ್ಯಾನ ಸರಿಯಾಗುತ್ತಾ ಇದೆ ಎಂದು. ವಿಷಯಾನಂದಕ್ಕೆ ಅನೇಕ ಸಾಧನ ಸಾಮಗ್ರಿಗಳು ಬೇಕು, ಆತ್ಮಾನಂದಕ್ಕೆ ಒಂದು ಶುದ್ಧವಾದ ಬುದ್ಧಿಯಿದ್ದರೆ ಸಾಕು. ವಟಪತ್ರಶಾಯಿ ಬಾಲಕೃಷ್ಣನು ಕಾಲಿನ ಹೆಬ್ಬೆಟ್ಟನ್ನು ಬಾಯಲ್ಲಿಟ್ಟುಕೊಂಡು ಆನಂದಿಸುತ್ತಿರುತ್ತಾನೆ. ಆನಂದವು ನಿನ್ನಲ್ಲಿಯೇ ಇದೆ, ನೀನೇ ಅದಾಗಿರುವೆ, ಅದನ್ನು ಅನುಭವಕ್ಕೆ ತಂದುಕೊ ಎಂಬುದನ್ನು ಇದು ತಿಳಿಸುತ್ತದೆ. ನಮ್ಮ ದಿನನಿತ್ಯದ ಚಟುವಟಿಕೆಗಳಲ್ಲಿಯೇ ಈ ಆನಂದವನ್ನು ಅನುಭವಿಸು ವುದಕ್ಕೆ ಸಾಧ್ಯವಿದೆ.

ದ್ವೇಷವಿರುವೆಡೆ ಪ್ರೀತಿಯನ್ನು ಬಿತ್ತುತ್ತ,
ನೋವು ಸಂಕಟವಲ್ಲಿ ಸಾಂತ್ವನವನೀಯುತ್ತ,
ಸಂಶಯವು ಇರುವಲ್ಲಿ ಶ್ರದ್ಧೆಯನು ಬಿತ್ತುತ್ತ,
ದುಃಖಿತಪ್ತರಿಗಾನಂದವನು ನೀಡುತ್ತ ಇರುವಂಥ
ನಿನ್ನ ಶಾಂತಿಯ ಕೈಗೊಂಬೆ ಮಾಡೆನ್ನ ದೇವ.

ಸಾಂತ್ವನ ಬಯಸುವ ಬದಲು ಸಾಂತ್ವನ ನೀಡುವ ಬಯಕೆ
ಗೌರವ ಬಯಸುವ ಬದಲು ಗೌರವ ನೀಡುವ ಬಯಕೆ
ಪ್ರೀತಿಯಾಸೆಯ ಬದಲು ಪ್ರೀತಿಸುವ ಬಯಕೆ
ಇವುಗಳನ್ನಿತ್ತು ರಕ್ಷಿಸು ನಮ್ಮ ದೇವ ದೇವ

ಆದ್ದರಿಂದ
ನೀಡುವುದರಿಂದ ಪಡೆದಂತಾಗುವುದು
ಕ್ಷಮಿಸುವುದರಿಂದ ಕ್ಷಮಿಸಲ್ಪಡುವೆವು
ಮೃತ್ಯುವಿನಿಂದ ಅಮೃತತ್ವ ದೊರೆಯುವುದು

ಎಂಬ ಸಂತ ಫ್ರಾನ್ಸಿಸ್‌ನ ಮಾತುಗಳು ನಮ್ಮ ಹೃದಯದಲ್ಲಿ ಸೇರಲಿ ಹಾಗೂ ಕಾಮಕ್ರೋಧಗಳೆಂಬ ಚಂಡಮುಂಡರ ರುಂಡ ಉರುಳಿಸಿದ ಚಾಮುಂಡೀದೇವಿಯು ಸದಾ ನಮ್ಮನ್ನು ರಕ್ಷಿಸಲಿ. ◆

## ಆಶ್ರಮದ ಕಾರ್ಯಕ್ರಮಗಳು

### ಏಪ್ರಿಲ್ 2004

| | | |
|---|---|---|
| ಏಕಾದಶಿ | 1 | ಗುರುವಾರ |
| ಏಕಾದಶಿ | 15 | ಗುರುವಾರ |
| ಶ್ರೀಬಸವೇಶ್ವರ ಜಯಂತಿ | 23 | ಶುಕ್ರವಾರ |
| ಶ್ರೀಶಂಕರ ಜಯಂತಿ | 24 | ಶನಿವಾರ |
| ಶ್ರೀರಾಮಾನುಜ ಜಯಂತಿ | 25 | ಭಾನುವಾರ |

ಪ್ರತಿ ಶನಿವಾರ ಇಂಗ್ಲಿಷಿನಲ್ಲೂ ಮತ್ತು ಪ್ರತಿ ಗುರುವಾರ ಮತ್ತು ಭಾನುವಾರಗಳಂದು ಕನ್ನಡದಲ್ಲೂ ಸಂಜೆ ೬ ರಿಂದ ೭ ಗಂಟೆಯವರೆಗೆ ಆಶ್ರಮದ ಸಭಾಂಗಣದಲ್ಲಿ ಆಧ್ಯಾತ್ಮಿಕ ಪ್ರವಚನಗಳು ನಡೆಯುತ್ತವೆ. ವಿವರಗಳಿಗೆ ಮೈಸೂರು ಶ್ರೀರಾಮ ಕೃಷ್ಣ ಆಶ್ರಮವನ್ನು ಸಂಪರ್ಕಿಸಿ.